## ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: **DCE/BUD/GEN/22/2022**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು ದಿನಾಂಕ 22.02.2023.

### ಅಧಿಕೃತ ಜ್ಞಾಪನ

ವಿಷಯ: ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಸರ್ಕಾರಿ / ಖಾಸಗಿ ಅನುದಾನಿತ ಪದವಿ ಮತ್ತು ಬಿ.ಎಡ್ ಕಾಲೇಜುಗಳ ಬೋಧಕರು ತತ್ಸಮಾನ ವೃಂದದವರಿಗೆ 2006ರ 6ನೇ ಪರಿಷ್ಕೃತ ಯುಜಿಸಿ ವೇತನ ಮತ್ತು 2016ರ 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗಳನ್ವಯ ವೇತನ ವ್ಯತ್ಯಾಸದ ಬಾಕಿಗಳನ್ನು ಪಾವತಿಸುವಾಗ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಹಿಂಪಡೆದು ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಪತ್ರ ಸಂಖ್ಯೆ ಇಡಿ 306 ಯು ಎನ್ ಇ 2021 ದಿನಾಂಕ 25.02.2022 ದಿನಾಂಕ 05.03.2022 ಮತ್ತು ದಿನಾಂಕ 09.03.2022.
2) ಸರ್ಕಾರದ ಪತ್ರ ಸಂಖ್ಯೆ ಇಡಿ 58 ಹೆಚ್ ಪಿ ಸಿ 2022 ದಿನಾಂಕ 27.04.2022.
3) ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ 17.05.2022.
4) ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ 16.12.2022.

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ಇಡಿ 37 ಯು ಎನ್ ಇ 2009 ದಿನಾಂಕ 24.12.2009ರ ಆದೇಶದಂತೆ ಇಲಾಖಾ ವ್ಯಾಪ್ತಿಗೊಳಪಡುವ ಸರ್ಕಾರಿ / ಖಾಸಗಿ ಅನುದಾನಿತ ಪದವಿ ಬೋಧಕರು ತತ್ಸಮಾನ ವೃಂದದವರಿಗೆ 2006ರ 6ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ವಯ ದಿನಾಂಕ 01.01.2006ರಿಂದ ಪೂರ್ವಾನ್ವಯವಾಗುವಂತೆ ವೇತನ ನಿಗದಿಪಡಿಸಿ ದಿನಾಂಕ 01.01.2006 ರಿಂದ 23.12.2009ರ ಅವಧಿಯ ವೇತನ ವ್ಯತ್ಯಾಸದ ಬಾಕಿಗಳನ್ನು ಪಾವತಿಸಲು ಹಲವು ಕಂತುಗಳಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಇಡಿ 483 ಯು ಎನ್ ಇ 2017 ದಿನಾಂಕ 16.03.2019ರ ಆದೇಶದಂತೆ ಇಲಾಖಾ ವ್ಯಾಪ್ತಿಗೊಳಪಡುವ ಸರ್ಕಾರಿ / ಖಾಸಗಿ ಅನುದಾನಿತ ಪದವಿ ಮತ್ತು ಬಿ.ಎಡ್ ಕಾಲೇಜುಗಳ ಬೋಧಕರು ತತ್ಸಮಾನ ವೃಂದದವರಿಗೆ 2016ರ 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ವಯ ದಿನಾಂಕ 01.01.2016ರಿಂದ ಪೂರ್ವಾನ್ವಯವಾಗುವಂತೆ ವೇತನ ನಿಗದಿಪಡಿಸಿ ದಿನಾಂಕ 01.01.2016 ರಿಂದ 31.03.2019ರ ಅವಧಿಯ ವೇತನ ವ್ಯತ್ಯಾಸದ ಬಾಕಿಗಳನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡಲಾಗಿದೆ.

ಉಲ್ಲೇಖ(01) ಮತ್ತು (02) ರ ಸರ್ಕಾರದ ಆದೇಶಗಳಲ್ಲಿ 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಂತೆ ದಿನಾಂಕ 01.01.2006 ರಿಂದ 23.12.2009ರ ಅವಧಿಯ ವೇತನ ವ್ಯತ್ಯಾಸದ ಬಾಕಿಗಳನ್ನು ಪಾವತಿಸುವಾಗ ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳೊಂದಿಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಹಿಂಪಡೆದು ಸರ್ಕಾರಕ್ಕೆ ಜಮೆ ಮಾಡುವಂತೆ ಸೂಚಿಸಲಾಗಿದೆ.

ಮುಂದುವರೆದು 2016ರ 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ವಯ ದಿನಾಂಕ 01.01.2016 ರಿಂದ 31.03.2019ರ ಅವಧಿಯ ವೇತನ ವ್ಯತ್ಯಾಸದ ಬಾಕಿಗಳನ್ನು ಪಾವತಿಸುವಾಗ ಈಗಾಗಲೇ ಪಡೆದಿರುವ ತುಟ್ಟಿಭತ್ಯೆಯ ಕಲಂನಲ್ಲಿ ಸರ್ಕಾರದಿಂದ ಕಾಲಕಾಲಕ್ಕೆ ಮಂಜೂರು ಮಾಡಿರುವ ತುಟ್ಟಿಭತ್ಯೆ ಹೆಚ್ಚಳವನ್ನು ಪರಿಗಣಿಸಿ ಲೆಕ್ಕಹಾಕದೇ ಶೇ 125ರ ದರದಲ್ಲಿ ತುಟ್ಟಿಭತ್ಯೆಯನ್ನು ಸೀಮಿತಗೊಳಿಸಿ (CONSTANT) ಲೆಕ್ಕಹಾಕಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಹಿಂಪಡೆದು ಸರ್ಕಾರಕ್ಕೆ ಜಮೆ ಮಾಡುವಂತೆ ಸೂಚಿಸಲಾಗಿದೆ.

ಸರ್ಕಾರದ ನಿರ್ದೇಶನದಂತೆ ಕ್ರಮವಹಿಸಲು ಉಲ್ಲೇಖ (03) ಮತ್ತು (04)ರ ಸುತ್ತೋಲೆಗಳಲ್ಲಿ ಈಗಾಗಲೇ ಸ್ಪಷ್ಟಪಡಿಸಿರುವಂತೆ 2006 ಮತ್ತು 2016ರ ಯುಜಿಸಿ ಹಿಂಬಾಕಿಯ ವೇತನ ವ್ಯತ್ಯಾಸದ ಬಾಕಿಗಳನ್ನು ಲೆಕ್ಕಾಚಾರಮಾಡಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ದಿನಾಂಕ 01.04.2019 ರಿಂದ 30.10.2019 / 31.11.2019 ರ ಅವಧಿಗೆ ನೌಕರರಿಗೆ ಪಾವತಿಸಬೇಕಾದ ವೇತನ ವ್ಯತ್ಯಾಸದ ಬಾಕಿ ಮೊತ್ತ ಹಾಗೂ ಈಗಾಗಲೇ Recovery ಆಗಿರುವ ಮೊತ್ತದೊಂದಿಗೆ ಹೊಂದಾಣಿಕೆ ಮಾಡುವುದು. ಹೊಂದಾಣಿಕೆ ಮಾಡಿಕೊಂಡ ನಂತರವೂ ಹೆಚ್ಚುವರಿಯಾಗಿ ಪಾವತಿಯಾಗಿರುವುದು ಕಂಡುಬಂದಲ್ಲಿ ವಸೂಲಿಮಾಡಿ ಸರ್ಕಾರಕ್ಕೆ ಜಮೆ ಮಾಡಲು ಕ್ರಮವಹಿಸುವುದು.

ಈ ಸಂಬಂಧ ಇಲಾಖಾ ವ್ಯಾಪ್ತಿಯ ಎಲ್ಲಾ ಡಿಡಿಓಗಳಿಗೆ ಲೆಕ್ಕಾಚಾರದ ವಿವರಗಳನ್ನು ಪರಿಷ್ಕರಿಸಲು ಸೂಚಿಸಲಾಗಿತ್ತು. ಅದರಂತೆ ಇಲಾಖಾ ವ್ಯಾಪ್ತಿಯ ಡಿಡಿಓ ಗಳು ಸಲ್ಲಿಸಿರುವ ಮಾಹಿತಿಯನ್ನು ಕ್ರೂಢೀಕರಿಸಿ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

ಕಾಲೇಜಿನಿಂದ ಸ್ವೀಕೃತವಾಗಿರುವ ಮಾಹಿತಿಯನ್ನಾಧರಿಸಿ ಕೇಂದ್ರ ಕಛೇರಿಯಲ್ಲಿ ಪರಿಶೀಲನೆ ಮಾಡಲಾದ ಕ್ರೂಢೀಕೃತ ವರದಿಯನ್ನು ಪ್ರಕಟಿಸುತ್ತಿದ್ದು ಕ್ರೂಢೀಕೃತ ನಮೂನೆಯ 16ನೇ ಕಲಂ ನಲ್ಲಿ ಪ್ರಸ್ತುತ ವಸೂಲಿ ಮಾಡಬೇಕಾದ ಮೊತ್ತವನ್ನು ನಮೂದಿಸಲಾಗಿದೆ. ಪ್ರಾಂಶುಪಾಲರುಗಳು ಸದರಿ ಮಾಹಿತಿಯನ್ನು ಕಾಲೇಜಿನ ದಾಖಲಾತಿಗಳೊಂದಿಗೆ ತಾಳೆ ಮಾಡಿ ಖಚಿತ ಪಡಿಸಿಕೊಂಡು ವಸೂಲಿಗೆ ಕ್ರಮ ವಹಿಸುವುದು. ಪಟ್ಟಿಯಲ್ಲಿ ನೌಕರರ ಹೆಸರು ಬಿಟ್ಟುಹೋಗಿದ್ದಲ್ಲಿ ಅಥವಾ ವಾಸ್ತವವಾಗಿ ವಸೂಲಿ ಮಾಡಬೇಕಾದ ಮೊತ್ತಕ್ಕಿಂತ ಕಡಿಮೆ ಮೊತ್ತ ನಮೂದಾಗಿದ್ದಲ್ಲಿ ಪ್ರಾಂಶುಪಾಲರ ಹಂತದಲ್ಲಿ ಸರಿಪಡಿಸಿ ನಿಖರವಾದ ಲೆಕ್ಕಾಚಾರದೊಂದಿಗೆ ಸರ್ಕಾರಕ್ಕೆ ಜಮೆ ಮಾಡಬೇಕಾದ ಮೊತ್ತವನ್ನು ವಸೂಲಿ ಮಾಡಿ ಜಮೆಮಾಡಲು ಕ್ರಮವಹಿಸತಕ್ಕದ್ದು

**ಪ್ರಸ್ತುತ ಇಲಾಖಾ ವ್ಯಾಪ್ತಿಯ ಎಲ್ಲಾ ಡಿಡಿಓಗಳು ತಮ್ಮ ಕಛೇರಿ/ಕಾಲೇಜುಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ನಿವೃತ್ತಿ ಹೊಂದಿರುವ ಬೋಧಕರು ತತ್ಸಮಾನ ವೃಂದದವರಿಗೆ 2006ರ ಮತ್ತು 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗಳನ್ವಯ ಬಾಕಿಗಳನ್ನು ಪಾವತಿಸುವಾಗ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಮತ್ತೊಮ್ಮೆ ತಮ್ಮ ಹಂತದಲ್ಲಿಯೇ ಪರಿಶೀಲಿಸಿ ಲೆಕ್ಕಾಚಾರ ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.**

ದಿನಾಂಕ01.04.2019 ರಿಂದ 31.10.2019ರ ಅವಧಿಗೆ ಪಾವತಿಸಬೇಕಾದ ಹಿಂಬಾಕಿ ಮೊತ್ತದೊಂದಿಗೆ ಹೊಂದಾಣಿಕೆ ಮಾಡಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಸಮಾನ ಕಂತುಗಳಲ್ಲಿ ವಸೂಲಿ ಮಾಡಿ ಖಜಾನೆ-2 ಚಲನ್ ಮೂಲಕ ಸರ್ಕಾರದ **ಲೆಕ್ಕ ಶೀರ್ಷಿಕೆ : 2202-03-911-0-02-364 Deduct Recovery of over payments of Previous years** ಗೆ ಜಮೆ ಮಾಡಲು ಕ್ರಮವಹಿಸಿ ಕೈಗೊಂಡ ಕ್ರಮದ ಬಗ್ಗೆ ಹದಿನೈದು ದಿನಗಳ ಒಳಗಾಗಿ ಈ ಕಛೇರಿಗೆ ವರದಿ ಸಲ್ಲಿಸುವುದು.

ಇನ್ನು ಮುಂದೆ ಕೇಂದ್ರ ಕಛೇರಿಗೆ ಉನ್ನತ ಎ.ಜಿ.ಪಿ ಮಂಜೂರಾತಿ/ ಪಿ.ಹೆಚ್.ಡಿ ಮುಂಗಡ ಬಡ್ತಿ ಪ್ರಸ್ತಾವನೆ, ಪಿಂಚಣಿ ಪ್ರಸ್ತಾವನೆಗಳನ್ನು ರವಾನಿಸುವ ಮೊದಲು 2006 ಮತ್ತು 2016 ಯುಜಿಸಿ ವೇತನ ಹಿಂಬಾಕಿಯಲ್ಲಿ ಹೆಚ್ಚುವರಿಯಾಗಿ ಪಡೆದಿರುವ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿರುವುದನ್ನು ಖಚಿತಪಡಿಸಿಕೊಂಡ ನಂತರವಷ್ಟೇ ಪ್ರಸ್ತಾವನೆ ಸಲ್ಲಿಸುವುದು. ಹೆಚ್ಚುವರಿ ಮೊತ್ತ ಸರ್ಕಾರಕ್ಕೆ ಜಮೆ ಮಾಡಿದ ಬಗ್ಗೆ ಖಜಾನೆ-2 ಚಲನ್ ಪ್ರತಿ ದೃಢೀಕರಿಸಿ ಸದರಿ ಪ್ರಸ್ತಾವನೆಗಳೊಂದಿಗೆ ಲಗತ್ತಿಸಿ ಸಲ್ಲಿಸಿದ್ದಲ್ಲಿ ಮಾತ್ರ ತಮ್ಮ ಮನವಿ ಪರಿಗಣಿಸಲಾಗುವುದು.

ನಿವೃತ್ತಿ ಹೊಂದಿದ ಸಿಬ್ಬಂದಿಗಳಿಂದ ವಸೂಲಿ ಮಾಡಲು ಹೆಚ್ಚುವರಿಯಾಗಿ ಪಡೆದಿರುವ ಮೊತ್ತವನ್ನುವಸೂಲಿ ಮಾಡಲು ತಮ್ಮ ಹಂತದಲ್ಲಿಯೇ ನೋಟಿಸ್ ಜಾರಿ ಮಾಡಿ ನಿಗದಿತ ಕಾಲಮಿತಿಯೊಳಗೆ ಸರ್ಕಾರಕ್ಕೆ ಜಮೆ ಮಾಡುವಂತೆ ಸೂಚಿಸುವುದು. ನಿವೃತ್ತಿ ಹೊಂದಿದ ಸಿಬ್ಬಂದಿಗಳು ನಿಗದಿತ ಕಾಲಮಿತಿಯೊಳಗೆ ಹೆಚ್ಚುವರಿ ಮೊತ್ತ ಪಾವತಿಸದೇ ಇದ್ದಲ್ಲಿ ಪೂರ್ಣ ವಿವರಗಳೊಂದಿಗೆ ಈ ಕಛೇರಿಗೆ ವರದಿ ಸಲ್ಲಿಸುವುದು.

ವರ್ಗಾವಣೆಹೊಂದಿರುವ ಬೋಧಕರುಗಳ ವಿವರಗಳನ್ನು ವರ್ಗಾವಣೆ ಹೊಂದುವ ಪೂರ್ವದಲ್ಲಿ ಕರ್ತವ್ಯ ನಿರ್ವಹಿಸಿದ ಕಾಲೇಜುಗಳಿಂದ ಪಡೆದು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನಲ್ಲಿ ವಸೂಲಾತಿಗೆ ಕ್ರಮವಹಿಸುವುದು. ನಿವೃತ್ತಿ ಹೊಂದಿರುವ ಬೋಧಕರುಗಳಿಗೆ ಸಂಬಂಧಿಸಿದಂತೆ ಯಾವ ಕಾಲೇಜಿನಲ್ಲಿ ನಿವೃತ್ತಿ ಹೊಂದಿರುವ ಕಾಲೇಜಿನ ಪ್ರಾಂಶುಪಾಲರು ವಸೂಲಾತಿಗೆ ಕ್ರಮವಹಿಸುವುದು.

ಎಲ್ಲಾ ಬೋಧಕರುಗಳಿಗೆ 2006ರ ಯುಜಿಸಿ ಹಿಂಬಾಕಿ ಮತ್ತು 2016ರ ಯುಜಿಸಿ ಹಿಂಬಾಕಿ ಪಾವತಿಸಿರುವ ವಿವರ, ಹೆಚ್ಚುವರಿ ಪಾವತಿ ವಿವರ ಮತ್ತು ಸರ್ಕಾರಕ್ಕೆ ಮರು ಜಮೆ ಮಾಡಿದ ವಿವರಗಳನ್ನು ಕಡ್ಡಾಯವಾಗಿ ಮೂಲ ಸೇವಾ ಪುಸ್ತಕದಲ್ಲಿ ನಮೂದಿಸಿ ಸಂಬಂಧಪಟ್ಟವರ ಸಹಿ ಪಡೆಯಲು ಅಗತ್ಯ ಕ್ರಮವಹಿಸುವುದು.

ತಪ್ಪು ಲೆಕ್ಕಾಚಾರದಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾದಲ್ಲಿ, ವಸೂಲಿ ಕ್ರಮ ವಿಳಂಬ ಮಾಡಿದ್ದಲ್ಲಿ ಅಥವಾ ನಿರ್ಲಕ್ಷತೆ ವಹಿಸಿದ್ದಲ್ಲಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಂದ ವಸೂಲಿ ಮಾಡಲು ಕ್ರಮವಹಿಸಲಾಗುವುದು ಹಾಗೂ ನಿಯಮಾನುಸಾರ ಶಿಸ್ತು ಕ್ರಮಜರುಗಿಸಲಾಗುವುದು.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿರುತ್ತದೆ)

ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ,

ಇವರಿಗೆ:

ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು

ಪ್ರತಿಗಳು:

1) ಸರ್ಕಾರದ ಪ್ರಧಾನಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆ ಬಹು ಮಹಡಿ ಕಟ್ಟಡ ಬೆಂಗಳೂರು- ಮಾಹಿತಿಗಾಗಿ
2) ಮಹಾಲೇಖಪಾಲರು ಕರ್ನಾಟಕ ಎ & ಇ ಬೆಂಗಳೂರು-01
3) ಕಛೇರಿ ಪ್ರತಿ / ಹೆಚ್ಚಿನ ಪ್ರತಿ